**ಸಾಕ್ಷಿಯನ್ನು ದಿಃ09.02.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ವಾದಪತ್ರದಲ್ಲಿ ಬರೆದ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ.

2. ನನ್ನ ಪತ್ನಿ ಹೆಸರು ಸುಕನ್ಯ. ನಮ್ಮ ಮದುವೆ 2001 ರಲ್ಲಿ ಆಗಿದೆ. ಅಲ್ಲಿಂದ ಇಲ್ಲಿವರೆಗೆ ಚೆನ್ನಾಗಿದ್ದೀರಿ ಎಂದರೆ, 2015 ರ ವರೆಗೆ ಚೆನ್ನಾಗಿದ್ದೆವು ಎಂದು ನುಡಿಯುತ್ತಾರೆ.

3. 2001 ರಿಂದ 2015 ರ ವರೆಗೆ ಮನೆಯ ವ್ಯವಹಾರ ನೀವೇ ನೋಡಿಕೊಳ್ಳುತ್ತಿದ್ದಿರಿ ಎಂದರೆ, ನಾನು ಹೊರಗಡೆ ಕೆಲಸ ಮಾಡುತ್ತಿದ್ದೆ, ಮನೆಯ ವ್ಯವಹಾರ ಅವರು ನೋಡಿಕೊಳ್ಳುತಿದ್ದರು.

4. ಮನೆಗೆ ಬೇಕಾದ ವಸ್ತುಗಳನ್ನು ನೀವೇ ತೆಗೆದುಕೊಂಡು ಬರುತ್ತಿದ್ದೀರಿ ಎಂದರೆ, ನಾನು ಮನೆಗೆ ಬಂದಾಗ ಇಬ್ಬರೂ ಹೋಗಿ ತೆಗೆದುಕೊಂಡು ಬರುತ್ತಿದ್ದೆವು.

5. ಬೇರೆಯವರಿಗೆ ಹಣ ಕೊಡುವುದು ತೆಗೆದುಕೊಳ್ಳುವುದು ನೀವೇ ಮಾಡುತ್ತಿದ್ದೀರಿ ಎಂದರೆ, ಬೇರೆಯರಿಗೆ ಹಣ ಕೊಡುವಷ್ಟು ಅನುಕೂಲ ಇರಲಿಲ್ಲ.

6. ನೀವು ಯಾವುದೇ ಸಾಲ ಮಾಡಿದರೂ ಮನೆಯ ಏಳಿಗೆಗೆ ಮಾಡುತ್ತಿದ್ದೀರಿ ಎಂದರೆ ನಾನು ಯಾವುದೇ ಸಾಲ ಮಾಡಿಲ್ಲ. ನನಗೆ ಯಾವುದೇ ದುಶ್ಚಟಗಳು ಇರುವುದಿಲ್ಲ.

7. ನೀವು ಎಲ್ಲಾ ವ್ಯವಹಾರಗಳನ್ನು ಕಾನೂನುಬದ್ಧವಾಗಿಯೇ ಮಾಡುತ್ತಿದ್ದೀರಿ ಎಂದರೆ ಸರಿ.

8. ಕಾನೂನುಬದ್ಧ ಅವಶ್ಯಕತೆಗೆ ನೀವು ಸಾಲ ಮಾಡುತ್ತಿದ್ದೀರಿ ಎಂದರೆ, ಸಾಲ ಮಾಡುತ್ತಿದ್ದೆವು ಮತ್ತು ವಾಪಸ್ ನೀಡುತ್ತಿದ್ದೆವು.

9. 2013 ರಲ್ಲಿ ನಾನು ಹೆಚ್.ಡಿ.ಕೋಟೆಯಲ್ಲಿ ಜಯಲಕ್ಷ್ಮೀ ಅಯ್ಯಂಗಾರ್ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದೆ. ಅದಕ್ಕಿಂತ ಹಿಂದೆ ಮದುವೆಯದ ಹೊಸದರಲ್ಲಿ 2005 ರ ವರೆಗೆ ಪಿರಿಯಾಪಟ್ಟಣದಲ್ಲಿ ಬೇಕರಿಯಲ್ಲಿ ಕೆಲಸ ಮಾಡಿದ್ದೆ. ನಾನು ಸ್ವಂತ ಬೇಕರಿ ಇಟ್ಟಿರಲಿಲ್ಲ ಎಂದರೆ ಸರಿ, ಸುಕನ್ಯ ರವರು ಗೋಣಿಕೊಪ್ಪ ರಸ್ತೆಯಲ್ಲಿ ಚಿಕ್ಕ ಟೀ ಅಂಗಡಿ ಇಟ್ಟುಕೊಂಡಿದ್ದರು.

10. 2010 ರಲ್ಲಿ ನೀವು ಪಿರಿಯಾಪಟ್ಟಣ ವೇಣು ಕಾಂಪ್ಲೆಕ್ಸ್ ನಲ್ಲಿ ಬೇಕರಿ ಇಟ್ಟುಕೊಂಡಿದ್ದೀರಿ ಎಂದರೆ ಸರಿಯಲ್ಲ.

11. 2018 ರಲ್ಲಿ ವಾದಿ ನೀಡಿದ ನೊಟೀಸಿಗೆ ನಾನು ಪ್ರತ್ಯುತ್ತರ ನೊಟೀಸು ನೀಡಿದ್ದೆ.

12. ವಾದಿಯ ಜೊತೆ 4 ಲಕ್ಷ 50 ಸಾವಿರಕ್ಕೆ ನೀವು ವ್ಯಾಪಾರ ಮಾಡಿ, 3 ಲಕ್ಷ 75 ಸಾವಿರ ಮುಂಗಡ ಪಡೆದಿದ್ದರೂ ಅವರಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅದರ ಭದ್ರತೆಗಾಗಿ ಹುಣಸೆಕುಪ್ಪೆ ಗ್ರಾಮದ ನಿವೇಶನವನ್ನು ಕರಾರು ಪತ್ರ ಮಾಡಿಕೊಟ್ಟಿದ್ದೀರಾ ಎಂದರೆ, ನನ್ನ ಪತ್ನಿ ಸಾಲ ಮಾಡಿದ್ದಾರೆ ಎಂದು ನನ್ನ ಬಳಿ ಬಲವಂತವಾಗಿ ಮಾಡಿಕೊಂಡಿದ್ದರು. ಖಾಲಿ ಜಾಗವನ್ನು ಸೇರಿ ಕರಾರು ಪತ್ರ ಮಾಡಿದ್ದೀರಿ ಎಂದರೆ, ಅಲ್ಲಿ ಮನೆ ಮಾತ್ರ ಇದೆ, ಖಾಲಿ ಜಾಗ ಇಲ್ಲ ಎಂದು ನುಡಿಯುತ್ತಾರೆ.

13. ಪಿರಿಯಾಪಟ್ಟಣದ ಪರಿಸರ ನಗರದಲ್ಲಿರುವ ಉರಗನಾಯಕ ನವರ ಮಗ ಮಹೇಶ ನಿಮಗೆ ಗೊತ್ತಾ ಎಂದರೆ, ಗೊತ್ತಿಲ್ಲ.

14. ಮಹೇಶ ರವರ ಮೂಲಕ ವಾದಿಯಿಂದ ನೀವು ಹಣ ಪಡೆದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

15. ನೀವು ಹಾಜರುಪಡಿಸಿರುವ ನಿಡಿ - 1 ರಿಂದ 48ರ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

16. ನಿಮ್ಮ ಪತ್ನಿ ಸುಕನ್ಯಾ ರವರು ನಿಮ್ಮ ವಿರುದ್ಧ ಕೌಟುಂಬಿಕ ದೌರ್ಜನ್ಯ ದೂರು ನೀಡಿದ್ದರು ಎಂದರೆ, ವಾದಿ ಕುಮ್ಮಕ್ಕು ನೀಡಿ ಹಾಕಿಸಿದ್ದರು.

17. ಕರಾರು ಪತ್ರದ ವಿಚಾರವಾಗಿ ನಾನು ದೂರು ನೀಡಿದ್ದೇನೆ. ಸದರಿ ದಾಖಲೆ ಹಾಜರುಪಡಿಸಿದ್ದೇನೆ.

18. ವಾದಿಯಿಂದ ಹಣ ಪಡೆದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ